ದಿನಾಂಕಃ09.09.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:**

ಮಾವಿನಕೆರೆ ಗ್ರಾಮದ ಸ.ನಂ.503/2 ರ ಪೂರ್ಣ ವಿಸ್ತೀರ್ಣ 3 ಎಕರೆ ಎಂದರೆ ಸರಿ. ದಾವ ಜಮೀನು ಮೂಲತಃ ಸುಬ್ಬಭಟ್ಟ ಎನ್ನುವವರಿಗೆ ಸೇರಿದ್ದು ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಪಣಿಯಮ್ಮ. ನನ್ನ ತಾಯಿಯ ತಂದೆಯ ಹೆಸರು ಸುಬ್ಬಭಟ್ಟ. ಸುಬ್ಬಭಟ್ಟ ರವರಿಗೆ ಪಣಿಯಮ್ಮ ಮತ್ತು ರಾಮಭಟ್ಟ ಎಂಬ ಹೆಸರಿನ ಮಕ್ಕಳು ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸುಬ್ಬಭಟ್ಟರವರಿಗೆ ಒಟ್ಟು 6 ಜನ ಮಕ್ಕಳು ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ರಾಮದಾಸಭಟ್ಟ ಎಂದರೆ ಸರಿ. ನನ್ನ ತಂದೆಯ ತಂದೆ ಹೆಸರು ಪದ್ಮನಾಭಭಟ್ ಎಂದರೆ ಸರಿ. ಸದರಿ ಸುಬ್ಬಭಟ್ಟ, ಪದ್ಮನಾಭಭಟ್ಟ, ಪಣಿಯಮ್ಮ ಮತ್ತು ರಾಮದಾಸಭಟ್ಟ ಹಾಲೀ ಜೀವಂತ ಇಲ್ಲ ಎಂದರೆ ಸರಿ. ಸುಬ್ಬಭಟ್ಟ ರವರು ದಾವಾ ಜಮೀನನ್ನು 1950 ನೇ ಇಸವಿಯಲ್ಲಿ ಪದ್ಮನಾಭಭಟ್ಟ ರವರಿಗೆ ಮೂಲಗೇಣಿ ಆಧಾರದ ಮೇಲೆ ಸ್ವಾಧೀನ ನೀಡಿದ್ದರು ಎಂದರೆ ಸರಿಯಲ್ಲ.

ದಾವ ಜಮೀನು ಕಾಫೀ ಜಮೀನು ಎಂದರೆ ಸರಿ. ಪದ್ಮನಾಭಭಟ್ಟ ರವರ ಮರಣಾನಂತರ ದಾವ ಜಮೀನು ನನ್ನ ತಂದೆ ರಾಮದಾಸಭಟ್ಟ ರವರಿಗೆ 1974-75 ನೇ ಸಾಲಿನಲ್ಲಿ ವಾರಸುದಾರಿಕೆ ಮೂಲಕ ಬಂದಿದೆ ಎಂದರೆ ಸರಿಯಲ್ಲ. ದಾವ ಜಮೀನು ಕಾಫೀ ಜಮೀನಾದ ಕಾರಣ ಕಾಫೀ ಮಂಡಳಿಯಿಂದ ರಾಮದಾಸಭಟ್ಟ ರವರ ಹೆಸರಿಗೆ CRC ನೀಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕ್ರಯಪತ್ರ ಆದ ನಂತರ CRC ಕೊಡಲಾಗಿದೆ ಎಂದು ನುಡಿಯುತ್ತಾರೆ. ದಾವಾ ಜಮೀನು ಕ್ರಯಪತ್ರದ ಆಧಾರದ ಮೇಲೆ ನನ್ನ ತಂದೆಗೆ ಬಂದಿದೆ ಎಂದು ಹೇಳಿರುವ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನನ್ನ ತಂದೆ ರಾಮದಾಸಭಟ್ಟ ರವರಿಗೆ ಒಟ್ಟು 10 ಎಕರೆ ಜಮೀನು ಇದೆ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ದಾವ ಜಮೀನನ್ನು ಸೇರಿದಂತೆ ಅವರಿಗೆ ಪಿತ್ರಾರ್ಜಿತವಾಗಿ ಬಂದ ಜಮೀನುಗಳ ಸ್ವಾಧೀನ ಮತ್ತು ಅನುಭವದಲ್ಲಿ ಇದ್ದರು ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ನಿಮ್ಮ ತಂದೆ ಬೇರೆ ಜಮೀನುಗಳನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆ ಅಡಿಗೆ ಕೆಲಸ ಮಾಡುತ್ತಿದ್ದು ಅದರ ಆದಾಯದಿಂದ ಬೇರೆ ಜಮೀನುಗಳನ್ನು ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ಬೇರೆ ಜಮೀನುಗಳನ್ನು ಖರೀದಿಸಿರುವುದರಿಂದ ಆ ಎಲ್ಲಾ ಜಮೀನುಗಳು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ.

ದಾವ ಜಮೀನುಗಳು ಸೇರಿದಂತೆ ನನ್ನ ತಂದೆಯ ಬಳಿ ಇದ್ದ ಎಲ್ಲಾ ಜಮೀನುಗಳ ಮೇಲೆ ಅವರಿಗೆ ಪೂರ್ಣ ಪ್ರಮಾಣದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 1974-75 ನೇ ಇಸವಿಯಲ್ಲಿ ಭೂಸುಧಾರಣೆ

ಕಾಯ್ದೆ ಗೆ ಆದ ತಿದ್ದುಪಡಿಯ ಬಗ್ಗೆ ನನಗೆ ತಿಳಿದಿದೆ. ಸದರಿ ತಿದ್ದುಪಡಿ ಕಾಯ್ದೆಯನ್ವಯ ಗೇಣಿ ಆಧಾರದ ಮೇಲೆ ಜಮೀನಿನ ಸ್ವಾಧೀನದಲ್ಲಿ ರುವವರು ನಮೂನೆ-7 ರಲ್ಲಿ ಅರ್ಜಿ ಸಲ್ಲಿಸಿ ತಮ್ಮ ಅಧಿಭೋಗ ಹಕ್ಕನ್ನು ನೊಂದಾಯಿಸಿಕೊಳ್ಳಬೇಕು ಹಾಗೂ ನಮೂನೆ-10 ರ ಹಕ್ಕುಪತ್ರ ಪಡೆಯಬೇಕು ಎಂದರೆ ಸಾಕ್ಷಿಯು ತಾವು ಆ ರೀತಿ ಅರ್ಜಿ ಸಲ್ಲಿಸಿಲ್ಲ ಹಾಗೂ ಹಕ್ಕು ಪತ್ರ ಪಡೆದಿಲ್ಲ ಎಂದು ನುಡಿಯುತ್ತಾರೆ. ಇನಾಂ ಜಮೀನಿನ ಅನುಭೋಗದಲ್ಲಿ ಇರುವವರು ಸಹಾ ಸೂಕ್ತ ಅರ್ಜಿ ಸಲ್ಲಿಸಿ ಗೇಣಿ ನೋಂದಾಯಿಸಿಕೊಂಡು ಜಮೀನಿನ ಹಕ್ಕುಪತ್ರ ಪಡೆಯಬಹುದಿತ್ತು ಎಂದರೆ ಸರಿ. ರಾಮಭಟ್ಟ ರವರು ನನ್ನ ತಂದೆಯ ಭಾವ ಎಂದರೆ ಸರಿ. ಈ ಕಾರಣ ನನ್ನ ತಂದೆ ಗೇಣಿ ಅರ್ಜಿ ಸಲ್ಲಿಸಲು ಇಚ್ಚಿಸಲಿಲ್ಲ ಎಂದರೆ ಸರಿಯಲ್ಲ. ರಾಮಭಟ್ಟ ರವರು ನನ್ನ ತಂದೆಗೆ ದಾವ ಜಮೀನಿನ ಖಾತೆಯನ್ನು ಕ್ರಯದ ಮೂಲಕ ನೀಡಲು ಇಚ್ಚಿಸಿದ್ದರು ಎಂದರೆ ಸರಿಯಲ್ಲ. ರಾಮಭಟ್ಟರವರ ಬಳಿ ಒಟ್ಟು ಕುಟುಂಬದ ಆದಾಯ ಇದ್ದ ಕಾರಣ ಆ ರೀತಿ ಕ್ರಯಪತ್ರ ಮಾಡಿಕೊಡಲು ಇಚ್ಚಿಸಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆ ಜಾವ ಜಮೀನನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿರುವ ಕಾರಣ ದಾವ ಜಮೀನು ಅವರ ಸ್ವಯಾರ್ಜಿತ ಸ್ವತ್ತಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ 6 ಜನ ಮಕ್ಕಳು. ದಾವ ಜಮೀನಿನ ಮೇಲೆ ನನ್ನ ಸಹೋದರ ಸಹೋದರಿಯರಿಗೂ ಹಕ್ಕು ಇತ್ತು ಎಂದರೆ ಸರಿಯಲ್ಲ. ನನ್ನ ಸಹೋದರ ಸಹೋದರಿಯವರ ಸಮ್ಮತಿ ಪಡೆಯದೆ ದಾವ ಜಮೀನನ್ನು ನನ್ನ ಹೆಸರಿಗೆ ಕೊಡಲು ನನ್ನ ತಂದೆಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 1990 ರ ಹಿಂದಿನಿಂದಲೂ ಸಹಾ ನಾನು ಕುದುರೆಮುಖ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ನೌಕರನಾಗಿದ್ದೆ ಎಂದರೆ ಸರಿ. ನನಗೆ ಒಳ್ಳೆಯ ಆದಾಯ ಇತ್ತು ಎಂದರೆ ಸರಿ. ಸಾಕ್ಷಿಯು ಸ್ವತಃ ನನ್ನ ಸಹೋದರಿಯರ ಮದುವೆ ಹಾಗೂ ಬಾಣಂತನವನ್ನು ನಾನೇ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ವಿಶೇಷಚೇತನ ಉಳ್ಳವರಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ ನಡೆದಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ವಿಶೇಷ ಚೇತನ ಉಳ್ಳ ವ್ಯಕ್ತಿ ಯಾದ ಕಾರಣ 1999 ನೇ ಇಸವಿಯಲ್ಲಿ ಅವರಿಗೆ STD ಭೂತ್ ಇಟ್ಟುಕೊಳ್ಳಲು ಸರ್ಕಾರದಿಂದ ಪರವಾನಗೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯು ಕಳಸ ಪೇಟೆಯಲ್ಲಿ STD ಭೂತ್ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಮನೆ ಇರುವ ಸ್ಥಳದ ಹೆಸರು ಮಕ್ಕಿಮನೆ ಎಂದರೆ ಸರಿ. ಪ್ರತಿವಾದಿಯೂ ಸಹಾ ಮಕ್ಕಿಮನೆಯಲ್ಲಿರುವ ಮನೆಯಲ್ಲಿಯೇ ನಮ್ಮೊಂದಿಗೆ ವಾಸಿಸುತ್ತಿದ್ದರು ಎಂದರೆ ಸರಿ. ಮಕ್ಕಿಮನೆಯಿಂದ ಕಳಸ ಪೇಟೆಗೆ ಬರಲು ಭದ್ರ ನದಿಯನ್ನು ದಾಟಿಕೊಂಡು ಬರಬೇಕು ಎಂದರೆ ಸರಿ. ಜೂನ್ ನಿಂದ ಅಕ್ಟೋಬರ್ ತಿಂಗಳವರೆಗೂ ಭದ್ರ ನದಿ ತುಂಬಿ ಹರಿಯುತ್ತದೆ ಎಂದರೆ ಸರಿ. ಆ ಸಮಯಕ್ಕೆ ನದಿಯನ್ನು ದಾಟಲು ಕಷ್ಟವಾಗುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ದೋಣಿ ಇದೆ ಎಂದು ನುಡಿಯುತ್ತಾರೆ. ಈ ರೀತಿ ಮಕ್ಕಿಮನೆಯಿಂದ ಕಳಸಪೇಟೆಗೆ ಬಂದು

STD ಭೂತ್ ನೋಡಿಕೊಳ್ಳಲು ಕಷ್ಟವಾಗುತ್ತದೆ ಎಂದು ಪ್ರತಿವಾದಿಯು ಕಳಸಪೇಟೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯು ಬಾಡಿಗೆ ಮನೆಯಲ್ಲಿ ವಾಸವಿದ್ದ ಸಂದರ್ಭದಲ್ಲಿ ನಾನು ನನ್ನ ತಂದೆಯ ಮೇಲೆ ಅನುಚಿತ ಪ್ರಭಾವ ಬೀರಿ ಅವರಿಗೆ ಪ್ರತಿವಾದಿಯ ಮೇಲೆ ದ್ವೇಷ ಬರುವ ಹಾಗೇ ಮಾತುಗಳನ್ನು ಹೇಳಿ ದಾವ ಜಮೀನನ್ನು ನನ್ನ ಹೆಸರಿಗೆ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಕೃಷಿಗೆಂದು ಬರುವ ಜನರಿಗೆ ನಾನೇ ಸಂಬಳ ಹಾಗೂ ಸಲಕರಣೆಗಳನ್ನು ಕೊಡುತ್ತೇನೆ ಎಂದು ಹೇಳಿ ನನ್ನ ತಂದೆಯು ನನಗೆ ದಾವ ಜಮೀನನ್ನು ದಿ.19.07.1999 ರಂದು ದಾನಪತ್ರದ ಮೂಲಕ ಕೊಡುವ ಹಾಗೇ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.